ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4233/2023

ಪಿ.ಡಬ್ಲ್ಯೂ -02

ಸಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರುಃ- ವೈಜುನಾಥ್ ಮಲಗಣ್ಣ
ತಂದೆ ಹೆಸರುಃ- ಶರಣಬಸಪ್ಪ
ವಯಸ್ಸುಃ- 31 ವರ್ಷ
ಉದ್ಯೋಗಃ- ಅಬಕಾರಿ ಪೇದೆ
ವಾಸಃ- ಕುಣಿಗಲ್

**ಸಾಕ್ಷಿಗೆ ದಿಃ17.05.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು 2020 ರಿಂದ ಇಲ್ಲಿಯವರೆಗೆ ಅಭಕಾರಿ ಇಲಾಖೆ ಕುಣಿಗಲ್ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 27.08.2021 ರಂದು ಬೆಳಿಗ್ಗೆ 11.45 ಗಂಟೆಗೆ ಚಾ.ಸಾ. 6 ಅವರಿಗೆ ಬಂದ ಬಾತ್ಮಿಯ ಆಧಾರದ ಮೇಲೆ ಹು.ದುರ್ಗ ಕೂಡು ರಸ್ತೆಯಲ್ಲಿ ಅಕ್ರಮವಾಗಿ ಸೇಂದಿ ಸಾಗಾಣಿಕೆ ಮಾಡುತ್ತಿದ್ದು ಬಾತ್ಮಿ ಬಂದಿದ್ದು ನಾವು ಆ ವೇಳೆಯಲ್ಲಿ ಹು.ದುರ್ಗ ಅಮೃತೂರು ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ ಮದ್ದೂರು ಕಡೆಯಿಂದ ದ್ವಿಚಕ್ರದಲ್ಲಿ ವಿಕ್ಟರ್ ಜಿ ಎಲ್. ಸಿಲವರ್ ಬಣ್ಣದ ದ್ವಿ ಚಕ್ರವಾಹನ ವಾಹನ ಸಂ ಕೆ.ಎ 02 ಈ ಎಂ. 7213 ನೇ ದರ ಮುಂಭಾಗದ ಪೇಟ್ರೋಲ್ ಟ್ಯಾಂಕ್ ಮೇಲೆ ಬಿಳಿ ಚೀಲ ಕಂಡು ಬಂದಿದ್ದು ಅದು ಕಡು ವಾಸನೆಯಿಂದ ಕೂಡಿದ್ದು **ನಾನು ಹಾಗೂ ಚಾ.ಸಾ.1 ಅಂಗ ಶೋಧನ ಮಾಡಿಕೊಂಡು** ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯವಿಲ್ಲದ್ದರಿಂದ ಚಾ.ಸಾ. 6 ಅವರು ಸ್ಥಳದಲ್ಲಿಯೇ ಕಲಂ 54 ರಿ ಅಡಿಯಲ್ಲಿ ಶೋಧನಾ ವಾರೆಂಟ್ ನ್ನು ತಯಾರಿಸಿಕೊಂಡು ಅಧಿಕಾರಿಗಳಾದ ಚಾಸಾ-1, 6 ಮತ್ತು 3 ರವರ ಸಹಿ ಮತ್ತು ವಾಹನ ಚಾಲಕರ ಸಹಿ ಪಡೆದು ನಂತರ ಬಿಳಿ ಪ್ಲಾಸ್ಟಿಕ್ ಕ್ಯಾನ್ ನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 10 ಲೀ ಸಾಮರ್ಥ್ಯದ ಕ್ಯಾನ್ ನಲ್ಲಿ ಬಿಳಿ ಬಣ್ಣದ

ದ್ರವ ಇರುವುದು ಕಂಡು ಬಂದಿರುತ್ತದೆ. ಸದರಿ ಬಿಳಿದ ಬಣ್ಣದ ದ್ರವ ಘಾಟು ವಾಸನೆಯದ್ದಾಗಿದ್ದು ಅದನ್ನು ಅಧಿಕಾರಿಗಳು ಪರಿಶೀಲಿಸಿ ಸೇಂದಿ ಇರುವುದಾಗಿ ಖಚಿತ ಪಡಿಸಿಕೊಂಡಿರುತ್ತಾರೆ. ನಂತರ ದ್ವಿಚಕ್ರವಾಹನದ ಚಾಲಕನಿಗೆ ಪರವಾನಗಿಯನ್ನು ವಿಚಾರಿಸಲಾಗಿ ಇಲ್ಲ ಎಂದು ತಿಳಿಸಿರುತ್ತಾನೆ. ಈ ರೀತಿ ಸಾಗಾಟ ಮಾಡುವುದು ಕರ್ನಾಟಕ ಅಬಕಾರಿ ಕಾಯ್ದೆ ಉಲ್ಲಂಘನೆಯಾಗಿರುತ್ತದೆಂದು ತಿಳಿಸಿ ನಂತರ ಮಾಪನದಿಂದ ಅಳತೆ ಮಾಡಲಾಗಿ 10 ಲೀಟರ್ ಸೇಂದಿ ಇರುವುದಾಗಿ ಚಾಸಾ-1 ರವರು ಸದರಿ ಕ್ಯಾನ್ ನಲ್ಲಿದ್ದ 180 ಮೀ ಸಾಮರ್ಥ್ಯದ 2 ಗಾಜಿನ ಬಾಟಲನಲ್ಲಿ 360 ಮೀ. ಲೀ. ಸೆಂದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಬಿಳಿ ಬಟ್ಟೆಯಿಂದ ಬಾಟಲಗಳನ್ನು ಸುತ್ತಿ ದಾರಿದಿಂದ ಕಟ್ಟಿ ಅರಗನ್ನು ಹಾಕಿ ಇಲಾಖಾ ಮುದ್ರೆ ಸ.ನಂ 167 ರಿಂದ ಸೀಲ್ ಮಾಡಿ ನಮ್ಮಗಳ ಸಹಿ, ವಾಹನ ಚಾಲಕನ ಸಹಿ ಮತ್ತು ಅಧಿಕಾರಿಗಳ ಸಹಿ ಪಡೆದು ಚೀಟಿಯನ್ನು ಅಂಟಿಸಲಾಯಿತು.

ದಾರಿಯಲ್ಲಿ ಹೋಗುವ ತಡೆದು ನಿಲ್ಲಿಸಿ ಪಂಚರಾಗಿ ಸಹಿ ಮಾಡಲು ಸಹಿಯನ್ನು ಯಾರು ಮಾಡಿರುವುದಿಲ್ಲ. ಆದ ಕಾರಣ ಇಲಾಖಾ ಪಂಚಸ್ಥರಾಗಿ ನಾವುಗಳೇ ಸಹಿ ಮಾಡಿ ಮಂಜುನಾಥ ಅವರ ಸಹಿ ಪಡೆದು ಅಧಿಕಾರಿಗಳು ಚಾಲಕನ ವಿಳಾಸ ಕೇಳಲಾಗಿ ತನ್ನ ಹೆಸರು ಮಂಜುನಾಥ ತಂದೆ ಹೆಸರು ಮಂಜು ಸೋಲಿಗರ ಜನಾಂಗ ವೆಂದು ಬೋರಾಪುರ ಗ್ರಾಮ ಮದ್ದೂರು ತಾಲ್ಲೂಕು ವೆಂದು ತಿಳಿಸಿರುತ್ತಾನೆ. ಉಳಿದ ಸೆಂದಿಯನ್ನು ದ್ವಿ ಚಕ್ರವಾಹನವನ್ನು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸುವುದಾಗಿ ಆತನಿಗೆ ತಿಳಿಸಿ ಹೇಳಿರುತ್ತೇವೆ. ಪಂಚನಾವೆಯನ್ನು 11.30 ರಿಂದ 12.30 ರ ವರೆಗೆ ಮಾಡಿ ಮುಗಿಸಿರುತ್ತೇವೆ. ಸ್ಥಳ ಮಹಜರ್ ಅನ್ನು ಹೆಚ್.ಪಿ ಲ್ಯಾಪ್ ಟಾಪ್ ನಲ್ಲಿ ಚಾ.ಸಾ. 6 ಸ್ಥಳದಲ್ಲಿ ಬರೆದು ಟೈಪ ಮಾಡಿ ಇಲಾಖಾ ಪ್ರಿಂಟ್ ನಲ್ಲಿ ಸರಕಾರಿ ವಾಹನ ಸಂ. ಕೆ.ಎ 06-ಜಿ. 0897 ನೇ ದರ ವಿದ್ಯುತ್ ಪ್ಲಗ್ ಬಳಸಿಕೊಂಡು ಪ್ರಿಂಟ್ ತೆಗೆಯಲಾಯಿತು. ಆರೋಪಿಯನ್ನು ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಮ. ಮಾ. ನ ಮೇಲೆ ನನ್ನ ಸಹಿ ಇರುತ್ತದೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ. ಅದನ್ನು ಈಗ ನೋಡುತ್ತಿದ್ದು ಪಂಚನಾಮೆ ನಿ.ಪಿ 1 ಎಂದು ಸಹಿಯನ್ನು ನಿ.ಪಿ 1(ಬಿ) ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಮು. ಮಾ. 1

ಎಂದು ಗುರುತಿಸಲಾಯಿತು. ಮು. ಮಾ. ಗಳ ಮೇಲೆ ಇರುವ ಸಹಿಯನ್ನು 1(ಬಿ) ಎಂದು ಗುರುತಿಸಲಾಯಿತು. ಲೀಸ್ಟ್ ಆಫ್ ಆರ್ಟಿಕಲ್ಸ್ ನಲ್ಲಿಯೂ ಸಹ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿ ನಿ.ಪಿ 2 (ಬಿ) ಎಂದು ಗುರುತಿಸಲಾಯಿತು. ಮಾದರಿ ಸೀಲಿನ ನಕಲಿನಲ್ಲಿಯೂ ಸಹ ನನ್ನ ಸಹಿ ಇರುತ್ತದೆ ಸದರಿ ದಾಖಲೆಯನ್ನು ನಿ.ಪಿ3 ಎಂದು ಸಹಿ ನಿ.ಪಿ.3(ಬಿ) ಎಂದು ಗುರುತಿಸಲಾಯಿತು.

ನ್ಯಾಯಾಲಯಕ್ಕೆ ಸಲ್ಲಿಸಿರುವ ರೆಕಾರ್ಡ್ಸ್ ಆಫ್ ರಿಜನ್ಸ್ ನಲ್ಲಿಯೂ ಸಹ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 4 ಎಂದು ಸಹಿ ನಿ.ಪಿ 4 (ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**